**ಸಾಕ್ಷಿಯನ್ನು ದಿಃ 06.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು ಶಿವಪುರ ಗ್ರಾಮದಲ್ಲಿ ವಾಸವಿದ್ದೇನೆ. ನಾನು ಹಾಗೂ ಗಾಯ ಗೋವಿಂದರವರು ಒಂದೇ ಊರಿನವರು. ನಾನು ವ್ಯವಸಾಯ ಹಾಗೂ ಶಾಂತಿ ಸೇವಾ ಸಂಸ್ಥೆಯಲ್ಲಿ ಅಟೆಂಡರ್ ಆಗಿ 2010 ರವರೆಗೆ ಕೆಲಸ ಮಾಡುತ್ತಿದ್ದೆ. ಅರ್ಜಿದಾರರು ಸಾಕ್ಷ್ಯ ಹೇಳಲು ಸಮನ್ಸ ತಂದು ಕೊಟ್ಟಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತು. ನಾನು ಅರ್ಜಿದಾರರನ್ನು ನೋಡಿಕೊಳ್ಳುತ್ತಿರುವುದಾಗಿ ಬರೆದಿದೆ. ನಾನು 1 ವರ್ಷ 8 ತಿಂಗಳಿಂದ ನೋಡಿಕೊಳ್ಳುತ್ತಿದ್ದೇನೆ. ದಿನಕ್ಕೆ ರೂ.400/- ಹಣ ಕೊಡುತ್ತಾರೆ. ಈ ಬಗ್ಗೆ ದಾಖಲೆ ಇಲ್ಲ.

ಅರ್ಜಿದಾರರು ಬೈಕ್ ಅಪಘಾತದಲ್ಲಿ ಬಿದ್ದಿರುವುದಾಗಿ ತಿಳಿದುಕೊಂಡಿದ್ದೇನೆ. ಕಾರು ಮತ್ತು ಬೈಕ್ ನಡುವೆ ಅಪಘಾತವಾಗಿರುವುದಾಗಿ ತಿಳಿದಿದೆ. ನಾನು ಅವರ ಸಂಬಂಧಿ ಅಲ್ಲ. ಒಂದೇ ಊರಾದ ಕಾರಣ ಹುಟ್ಟಿನಿಂದ ತಿಳಿದಿದೆ. ಅರ್ಜಿದಾರರಿಗೆ ಪರಿಹಾರ ಬರಲಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆವಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾನು ಹೋಗಿದ್ದೇನೆ. ನಾವು ಒಂದೇ ಊರಿನವರಾದ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**

**ಮತ್ತು ಎಂ.ಎ.ಸಿ.ಟಿ., ಮೈಸೂರು.**